**<u>ಓ.ಎಂ.ಆರ್. ಉತ್ತರ ಪತ್ರಿಕೆ ಭರ್ತಿ ಮಾಡುವ ಸೂಚನೆಗಳು :</u> (ಭರ್ತಿ ಮಾಡುವ ಮಾದರಿಯನ್ನು ಕೊನೆಯಲ್ಲಿ ನೀಡಲಾಗಿದೆ)**

1) ಒಂದು ಅರ್ಜಿಯನ್ನು ಸಲ್ಲಿಸಿರುವ ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸಿರುವ ಜಿಲ್ಲೆಯ ವೃತ್ತವನ್ನು ಮಾತ್ರ ಭರ್ತಿ ಮಾಡುವುದು.
2) ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಸಲ್ಲಿಸಿರುವ ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸಿರುವ ಜಿಲ್ಲೆಗಳ ಪೈಕಿ ಆಯ್ಕೆ ಬಯಸಿದ ಒಂದು ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡಿ ವೃತ್ತವನ್ನು ತುಂಬುವುದು. ಹಾಗೂ ಆಯ್ಕೆ ಮಾಡಲಾದ ಜಿಲ್ಲೆಯ ಅರ್ಜಿ ಸಂಖ್ಯೆ ಮತ್ತು ರೋಲ್ ನಂಬರ್‌ನ್ನು ಓ.ಎಂ.ಆರ್.ನಲ್ಲಿನ ಕ್ರ.ಸಂ. I ಮತ್ತು II ರಲ್ಲಿ ಭರ್ತಿ ಮಾಡುವುದು. ತಾವು ಆಯ್ಕೆ ಮಾಡಿದ ಜಿಲ್ಲೆಗೆ ಮಾತ್ರ ನಿಮ್ಮನ್ನು ಆಯ್ಕೆಗೆ ಪರಿಗಣಿಸಲಾಗುವುದು.

* ನೀವು ಆಯ್ಕೆ ಮಾಡಿದ ಘಟಕವನ್ನು ಮಾತ್ರ **ಅರ್ಹತೆ ಮತ್ತು ಆಯ್ಕೆಗೆ** ಪರಿಗಣಿಸಲಾಗುವುದು. ಭರ್ತಿ ಮಾಡದಿದ್ದಲ್ಲಿ ನೇಮಕಾತಿ ಪ್ರಾಧಿಕಾರ ಕೈಗೊಳ್ಳುವ ಕ್ರಮವೇ ಅಂತಿಮವಾಗಿರುತ್ತದೆ.

**<u>ವಿಶೇಷ ಸೂಚನೆಗಳು :</u>**

1) **ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗಬೇಕಾಗಿರುವ ಸಮಯ:–** ರಾಜ್ಯದಲ್ಲಿ ಕೋವಿಡ್ ಸೋಂಕು ಹರಡುತ್ತಿರುವ ಹಿನ್ನಲೆಯಲ್ಲಿ ಅಭ್ಯರ್ಥಿಗಳಿಗೆ ಥರ್ಮಲ್ ಸ್ಕ್ಯಾನಿಂಗ್ ಮತ್ತು ಸ್ಯಾನಿಟೈಜೇಷನ್ ಮಾಡಬೇಕಾಗಿರುವುದರಿಂದ ಹಾಗೂ ಬೆರಳುಮುದ್ರೆ ದತ್ತಾಂಶ ಪಡೆಯಬೇಕಾಗಿರುವುದರಿಂದ ಅಭ್ಯರ್ಥಿಗಳು **ಬೆಳಿಗ್ಗೆ 08.30** ಗಂಟೆಗೆ ಪರೀಕ್ಷಾ ಕೇಂದ್ರದಲ್ಲಿ ಕಡ್ಡಾಯವಾಗಿ ಹಾಜರಿರತಕ್ಕದ್ದು. ಪರೀಕ್ಷೆಗೆ ನಿಗಧಿಪಡಿಸಿದ ಪೂರ್ಣ ಅವಧಿಯು ಮುಗಿಯುವವರೆವಿಗೂ ಯಾವುದೇ ಅಭ್ಯರ್ಥಿಯು ಹೊರ ಹೋಗುವಂತಿಲ್ಲ.
2) ಅಭ್ಯರ್ಥಿಗಳು ಯಾವುದಾದರೂ ಒಂದು ಮೂಲ ಗುರುತಿನ ಚೀಟಿ (Original Identification Card) ಯೊಂದಿಗೆ ಪ್ರವೇಶಪತ್ರವನ್ನು ಪರೀಕ್ಷಾ ಕೇಂದ್ರದಲ್ಲಿ ಪರಿಶೀಲನೆಗೆ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. (Passport, Pancard, Voter ID, Adhar-U.I.D, Govt. Employer Id, (or) Driving License) ನಕಲು ಪ್ರತಿ ಅಥವಾ ಸ್ಕ್ಯಾನ್ ಮಾಡಿರುವ ಪ್ರತಿಯನ್ನು ಅನುಮತಿಸಲಾಗುವುದಿಲ್ಲ. ಈ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಹಾಜರ್‌ಪಡಿಸದಿದ್ದಲ್ಲಿ ಪರೀಕ್ಷಾ ಕೊಠಡಿಯೊಳಗೆ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.
3) ಅಭ್ಯರ್ಥಿಗಳು ಕಡ್ಡಾಯವಾಗಿ ಮಾಸ್ಕ್ ಅಥವಾ ಮುಖಗವಸು (Face Cover) ಧರಿಸತಕ್ಕದ್ದು. ಮಾಸ್ಕ್ ಅಥವಾ ಮುಖಗವಸು ಧರಿಸದ ಅಭ್ಯರ್ಥಿಗಳನ್ನು ಪರೀಕ್ಷಾ ಕೊಠಡಿಯೊಳಗೆ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.
4) ಅಭ್ಯರ್ಥಿಗಳು ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿ/ಸಿಬ್ಬಂದಿಗಳು ಸೂಚಿಸಿದಲ್ಲಿ ಪರಿಶೀಲನೆಗಾಗಿ ಮಾಸ್ಕ್‌ನ್ನು ತೆಗೆಯತಕ್ಕದ್ದು.
5) ಅಭ್ಯರ್ಥಿಗಳು ಸ್ವತಃ Sanitizer ಅನ್ನು (ಸಣ್ಣ ಆಳತೆಯ) ಪಾರದರ್ಶಕವಾದ ಬಾಟಲ್‌ನಲ್ಲಿ (Transparent Bottle) ತರಬಹುದು ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದ ಹೊರಗೆ ಮತ್ತು ಒಳಗೆ ಸಾಮಾಜಿಕ ಅಂತರವನ್ನು ಎಲ್ಲಾ ಸಮಯದಲ್ಲೂ ಕಡ್ಡಾಯವಾಗಿ ಕಾಯ್ದುಕೊಳ್ಳತಕ್ಕದ್ದು.

**<u>ಸೂಚನೆಗಳು :</u>**

1. ಲಿಖಿತ ಪರೀಕ್ಷೆಯನ್ನು ನಡೆಸುವ ಕುರಿತು ವಿವರವಾದ ಸೂಚನೆಗಳು ಈ ಕಛೇರಿಯ ಅಧಿಕೃತ ವೆಬ್‌ಸೈಟ್‌ನಲ್ಲಿ https://recruitment.ksp.gov.in or http://app.cpc21.ksp-online.in/Login.aspx ನಲ್ಲಿ ಲಭ್ಯವಿರುತ್ತವೆ.
2. ಪ್ರವೇಶ ಪತ್ರವನ್ನು ಪಡೆದುಕೊಂಡ ಕೂಡಲೇ ಅದರಲ್ಲಿನ ವಿವರಗಳನ್ನು ಪರಿಶೀಲಿಸಿಕೊಳ್ಳುವುದು. ಈ ಲಿಖಿತ ಪರೀಕ್ಷೆಯ ಪ್ರವೇಶ ಪತ್ರವನ್ನು ನೇಮಕಾತಿ ಪೂರ್ಣಗೊಳ್ಳುವವರೆಗೆ ಸುರಕ್ಷಿತವಾಗಿ ಇಟ್ಟುಕೊಳ್ಳತಕ್ಕದ್ದು.
3. ಪ್ರವೇಶ ಪತ್ರವನ್ನು ಹಾಜರುಪಡಿಸದಿದ್ದಲ್ಲಿ ಪರೀಕ್ಷಾ ಕೇಂದ್ರ/ಕೊಠಡಿಗೆ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.
4. ಪರೀಕ್ಷಾ ಕೊಠಡಿಯೊಳಗೆ ಯಾವುದೇ ಇತರೆ ನಕಲು ವಸ್ತು, ಪೇಜರ್ಸ್ ಮೊಬೈಲ್ ಫೋನ್ಸ್, ಕ್ಯಾಲಕುಲೇಟರ್ ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ರಿಸ್ಟ್‌ವಾಚ್ ಇತ್ಯಾದಿ ಸೇರಿದಂತೆ ಪುಸ್ತಕಗಳು, ಕಾಪಿ ಚೀಟಿಗಳು, ಟಿಪ್ಪಣಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿಷೇದಿಸಲಾಗಿದೆ. ಯಾವುದೇ ನಕಲು ವಸ್ತುಗಳು ಇಟ್ಟುಕೊಂಡಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು.
5. ಅಭ್ಯರ್ಥಿಗಳು ಮೊಬೈಲ್/ಸೆಲ್ಯ್ಯೂಲಾರ್ ಫೋನ್, ಟ್ಯಾಬ್ಲೆಟ್, ಪೆನ್‌ಡ್ರೈವ್, ಬ್ಲೂಟೂತ್ ಡಿವೈಸ್, ಸ್ಮಾರ್ಟ್‌ವಾಚ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಲಾಗ್ ಟೇಬಲ್ಸ್, ಕೈಚೀಲ, ಪರ್ಸ್, ನೋಟುಗಳು, ಚಾರ್ಟ್, ಬಿಡಿ ಹಾಳೆಗಳು ಅಥವಾ ರೆಕಾರ್ಡಿಂಗ್ ವಸ್ತುಗಳನ್ನು ಅವರ ಬಳಿಯಲ್ಲಿಟ್ಟುಕೊಂಡಿಲ್ಲದಿರುವ ಬಗ್ಗೆ ಮತ್ತು ಮೈಯಲ್ಲಿ ಲಗತ್ತಿಸಿಕೊಂಡಿಲ್ಲದಿರುವ ಬಗ್ಗೆ ಪರಿಶೀಲನೆಗೆ ಒಳಪಡಿಸಲಾಗುವುದು.
6. ನಿಮ್ಮ ವೈಯಕ್ತಿಕ ವಸ್ತುಗಳನ್ನು ಅಥವಾ ಅಮೂಲ್ಯ ವಸ್ತುಗಳನ್ನು ಪರೀಕ್ಷಾ ಕೇಂದ್ರದ ಹೊರಗೆ ಭ್ರದವಾಗಿ ಇಡಲು ಯಾವುದೇ ವ್ಯವಸ್ಥೆ ಇರುವುದಿಲ್ಲ.

7. ಅಭ್ಯರ್ಥಿಗಳು ತಮ್ಮ ಸ್ಥಾನವನ್ನು ತಿಳಿದುಕೊಳ್ಳುವುದಕ್ಕಾಗಿ ಹಾಗೂ ಬೆರಳುಮುದ್ರೆ ದತ್ತಾಂಶ ಪಡೆಯಬೇಕಾಗಿರುವುದರಿಂದ ಅಭ್ಯರ್ಥಿಗಳು **ಬೆಳಿಗ್ಗೆ 08.30** ಗಂಟೆಗೆ ಪರೀಕ್ಷಾ ಕೇಂದ್ರದಲ್ಲಿ ಕಡ್ಡಾಯವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಲು ಸಲಹೆ ನೀಡಲಾಗಿದೆ. ಪರೀಕ್ಷಾ ಪ್ರಾರಂಭಕ್ಕೆ 20 ನಿಮಿಷ ಮುಂಚಿತವಾಗಿ ಅಭ್ಯರ್ಥಿಯು ಪರೀಕ್ಷಾ ಕೊಠಡಿಯೊಳಗೆ ಹಾಜರಾಗಬೇಕು. ಪರೀಕ್ಷೆ ಪ್ರಾರಂಭವಾದ 10 ನಿಮಿಷಗಳ ನಂತರ ಬರುವ ಯಾವುದೇ ಅಭ್ಯರ್ಥಿಗೆ ಪರೀಕ್ಷಾ ಕೊಠಡಿಗೆ ಪ್ರವೇಶ ನೀಡಲಾಗುವುದಿಲ್ಲ. ಪರೀಕ್ಷೆಗೆ ನಿಗದಿಪಡಿಸಿದ ಪೂರ್ಣ ಅವಧಿಯು ಮುಗಿಯುವವರೆಗೆ ಯಾವುದೇ ಅಭ್ಯರ್ಥಿಯು ಹೊರ ಹೋಗುವಂತಿಲ್ಲ.

8. ಅಭ್ಯರ್ಥಿಗಳು ನಾಮಿನಲ್ ರೋಲ್‌ನಲ್ಲಿ ಮುದ್ರಿತವಾಗಿರುವ ತಮ್ಮ ಹೆಸರು, ಭಾವಚಿತ್ರ ಹಾಗೂ ನೋಂದಣಿ ಸಂಖ್ಯೆಯನ್ನು ಖಚಿತಪಡಿಸಿಕೊಂಡ ನಂತರವೇ ನಾಮಿನಲ್ ರೋಲ್‌ನಲ್ಲಿ ನಿಗದಿಪಡಿಸಿದ ಅಂಕಣಗಳಲ್ಲಿ ಸಹಿ ಹಾಕಬೇಕು.

9. ಪ್ರವೇಶ ಪತ್ರದಲ್ಲಿರುವ ಅರ್ಜಿ ಸಂಖ್ಯೆ, ರೋಲ್ ನಂ. ಮತ್ತು ಹಂಚಿಕೆ ಮಾಡಿದ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ನಮೂದಿಸಿ ಸಂಬಂಧಿತ ವೃತ್ತಗಳನ್ನು ಕಡ್ಡಾಯವಾಗಿ ಸರಿಯಾಗಿ ಗುರುತು ಮಾಡಬೇಕು. ತಪ್ಪಿದ್ದಲ್ಲಿ ಉತ್ತರ ಹಾಳೆಯನ್ನು / OMR ಹಾಳೆಯನ್ನು ಮೌಲ್ಯಮಾಪನಗೊಳಿಸದೆ ರದ್ದುಗೊಳಿಸಲಾಗುವುದು. ಲಿಖಿತ ಪರೀಕ್ಷೆಯ ನಂತರ ಅವುಗಳನ್ನು ಭರ್ತಿ ಮಾಡುವಂತೆ ಕೋರಿದಲ್ಲಿ ಅಂತಹ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

10. ಅಭ್ಯರ್ಥಿಗಳು ಕಪ್ಪು/ನೀಲಿ ಬಾಲ್‌ಪಾಯಿಂಟ್ ಪೆನ್ನು ತರತಕ್ಕದ್ದು. ಬ್ಲೇಡ್, ರಬ್ಬರ್ ಅಥವಾ ವೈಟ್‌ನರ್ (Correcting Fluid) ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

11. ಅಭ್ಯರ್ಥಿಯೂ ಪ್ರಶ್ನೆಪತ್ರಿಕೆಗೆ ಉತ್ತರಿಸುವ ಮುನ್ನ ತನಗೆ ಹಂಚಿಕೆಯಾಗಿರುವ ಓ.ಎಂ.ಆರ್ ಉತ್ತರ ಹಾಳೆಯೂ ತನದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಹಾಗಲ್ಲದೆ ಅಭ್ಯರ್ಥಿಯೂ ಬೇರೊಬ್ಬ ಅಭ್ಯರ್ಥಿಯ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಂತಹ ಓ.ಎಂ.ಆರ್. ಉತ್ತರಹಾಳೆಯನ್ನು ಅಸಿಂಧು ಎಂದು ಪರಿಗಣಿಸಲಾಗುವುದು.

12. ಅಭ್ಯರ್ಥಿಯೂ ಓ.ಎಂ.ಆರ್ ಉತ್ತರಹಾಳೆಯಲ್ಲಿ ಮುದ್ರಿತವಾಗಿರುವ ನೊಂದಣಿ ಸಂಖ್ಯೆಯನ್ನು ಪವ್ರೇಶಪತ್ರದಲ್ಲಿ ಮುದ್ರಿತವಾಗಿರುವ ನೊಂದಣಿ ಸಂಖ್ಯೆಯೊಂದಿಗೆ ಪರಿಶೀಲಿಸಿ ತಾಳೆ ಮಾಡಿಕೊಳ್ಳತಕ್ಕದ್ದು, ಒಂದು ವೇಳೆ ವ್ಯತ್ಯಾಸವಿದ್ದಲ್ಲಿ ಸಂವೀಕ್ಷಕರಿಗೆ ಕೂಡಲೇ ಮಾಹಿತಿ ನೀಡತಕ್ಕದ್ದು.

13. **ಅರ್ಜಿ ಸಂಖ್ಯೆ, ರೋಲ್ ನಂ., ಪ್ರಶ್ನೆ ಪತ್ರಿಕೆಯ ಶ್ರೇಣಿ, ಜಿಲ್ಲೆಗಳನ್ನು ಆಯ್ಕೆ ಮಾಡುವುದನ್ನು ತಪ್ಪಾಗಿ ನಮೂದಿಸಿದ್ದಲ್ಲಿ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ. ಉದಾಹರಣೆಯಲ್ಲಿ ತೋರಿಸಿರುವಂತೆಯೇ ಭರ್ತಿ ಮಾಡತಕ್ಕದ್ದು. ಅರ್ಜಿ ಸಂಖ್ಯೆ ಮತ್ತು ಘಟಕವನ್ನು ಭರ್ತಿ ಮಾಡದೇ ಖಾಲಿ ಬಿಟ್ಟಲ್ಲಿ ಅಥವಾ ಅರ್ಜಿ ಸಲ್ಲಿಸಿದ ಘಟಕವನ್ನು ಹೊರತುಪಡಿಸಿ ಬೇರೆ ಘಟಕವನ್ನು ಆಯ್ಕೆ ಮಾಡಿದ್ದಲ್ಲಿ ಅಥವಾ ಒಂದಕ್ಕಿಂತ ಹೆಚ್ಚು ಘಟಕವನ್ನು ಭರ್ತಿ ಮಾಡಿದ್ದಲ್ಲಿ ನೇಮಕಾತಿ ಪ್ರಾಧಿಕಾರ ಕೈಗೊಳ್ಳುವ ಕ್ರಮವೇ ಅಂತಿಮವಾಗಿರುತ್ತದೆ.**

14. ಓ.ಎಂ.ಆರ್. ಉತ್ತರ ಹಾಳೆಯು ಹಾಳಾಗದಂತೆ ಎಚ್ಚರ ವಹಿಸುವುದು ಹಾಗೂ ಓ.ಎಂ.ಆರ್ ಉತ್ತರ ಹಾಳೆಯು ಸಂವೀಕ್ಷಕರಿಗೆ ಹಿಂದಿರುಗಿಸುವಾಗ ತಪ್ಪದೆ ಎಲ್ಲಾ ಕಾಲಂಗಳನ್ನು ಸರಿಯಾಗಿ ಬರೆದಿರುವುದನ್ನು ಹಾಗೂ ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತಪಡಿಸಿಕೊಳ್ಳಿ ಮತ್ತು ಪ್ರವೇಶ ಪತ್ರದಲ್ಲಿಯೂ ಸಹ ಸಹಿ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.

15. ಪ್ರಶ್ನೆ ಪತ್ರಿಕೆಯನ್ನು ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿ ಮುದ್ರಿಸಲಾಗಿದೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡತಕ್ಕದ್ದು.

16. ಪ್ರಶ್ನೆ ಪತ್ರಿಕೆಯನ್ನು ಪಡೆದ ತಕ್ಷಣ ಅದರಲ್ಲಿ ಏನಾದರೂ ಲೋಪದೋಷಗಳಿದ್ದಲ್ಲಿ ಪ್ರಾರಂಭದಲ್ಲಿಯೇ ಪರೀಕ್ಷಿಸಿಕೊಳ್ಳಬೇಕು ಏಕೆಂದರೆ ಓಎಂಆರ್ ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಭರ್ತಿ ಮಾಡಿದ ನಂತರ ಪ್ರಶ್ನೆ ಪತ್ರಿಕೆ ಬದಲಾವಣೆಗೆ ಅವಕಾಶವಿರುವುದಿಲ್ಲ.

17. ಪ್ರಶ್ನೆ ಪತ್ರಿಕೆಯಲ್ಲಿ ಅಥವಾ ಓಎಂಆರ್ ನಲ್ಲಿ ಯಾವುದಾದರೂ ಲೋಪ ದೋಷಗಳು ಕಂಡುಬಂದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಮೇಲ್ವಿಚಾರಕರಿಗೆ ಲಿಖಿತ ರೂಪದಲ್ಲಿ ಪರೀಕ್ಷಾ ದಿನವೇ ಮನವಿಯನ್ನು ಸಲ್ಲಿಸಿ ಸ್ವೀಕೃತಿಯನ್ನು ಪಡೆಯತಕ್ಕದ್ದು. ಲಿಖಿತ ಪರೀಕ್ಷೆಯ ನಂತರದ ದಿನಗಳಲ್ಲಿ ಸಲ್ಲಿಸುವ ಯಾವುದೇ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

18. ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರ ಮುದ್ರಿತವಾಗದಿದ್ದಲ್ಲಿ ಅಥವಾ ಸ್ಪಷ್ಟವಾಗಿಲ್ಲದಿದ್ದಲ್ಲಿ, ಅಭ್ಯರ್ಥಿಯು ಪರೀಕ್ಷಾ ದಿನದಂದು ಪ್ರವೇಶ ಪತ್ರದೊಂದಿಗೆ ಎರಡು ಸ್ಟಾಂಪ್ ಅಳತೆಯ (Stamp Size) ಭಾವಚಿತ್ರಗಳನ್ನು ಕಡ್ಡಾಯವಾಗಿ ತರತಕ್ಕದ್ದು. ಭಾವಚಿತ್ರಗಳನ್ನು ಸಂವೀಕ್ಷಕರಿಗೆ ನೀಡಿ ನಾಮಿನಲ್ ರೋಲ್‌ನಲ್ಲಿನ ನಿಗದಿತ ಅಂಕಣದಲ್ಲಿ ಅಂಟಿಸಿ ದೃಢೀಕರಿಸುವಂತೆ ತಿಳಿಸುವುದು.

19. ಅಭ್ಯರ್ಥಿಯೂ ಕಾರ್ಬನ್ ರಹಿತ ಓ.ಎಂ.ಆರ್ ಉತ್ತರಹಾಳೆಯ ಪ್ರತಿ (Candidate Copy) ಯನ್ನು ಅಂತಿಮ ಆಯ್ಕೆಪಟ್ಟಿ ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು. ಮತ್ತು ನೇಮಕಾತಿ ಸಮಿತಿಯು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದ್ದಲ್ಲಿ ತಪ್ಪದೆ ಅದೇ ಪ್ರತಿಯನ್ನು ಹಾಜರುಪಡಿಸತಕ್ಕದ್ದು.

20. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಯಾವುದೇ ರೀತಿಯ ಚರ್ಚೆಮಾಡುವುದು ಅಥವಾ ಪರೀಕ್ಷಾ ಸಿಬ್ಬಂದಿಯೊಡನೆ ಅನುಚಿತವಾಗಿ ವರ್ತಿಸುವುದನ್ನು ನಿಷೇದಿಸಿದೆ.

21. ಪ್ರವೇಶ ಪತ್ರವನ್ನು ಪಡೆದುಕೊಂಡ ಮಾತ್ರಕ್ಕೆ ನಿಮ್ಮ ಅಭ್ಯರ್ಥಿತ್ವನವನ್ನು ಒಪ್ಪಿಕೊಂಡಿದೆ ಎಂದು ಅರ್ಥವಲ್ಲ ಏನಾದರೂ ತಪ್ಪುಗಳು ಕಂಡು ಬಂದಲ್ಲಿ ಯಾವ ಹಂತದಲ್ಲಾದರೂ ನಿಮ್ಮ ಅಭ್ಯರ್ಥಿತ್ವವನ್ನು ರದ್ದುಮಾಡುವ ಅಧಿಕಾರವನ್ನು ನೇಮಕಾತಿ ಸಮಿತಿಯು ಹೊಂದಿರುತ್ತದೆ.

22. ಪರೀಕ್ಷಾ ಕೇಂದ್ರಗಳಲ್ಲಿ ಹೆಚ್.ಹೆಚ್.ಎಂ.ಡಿ. (ಹ್ಯಾಂಡ್ ಹೋಲ್ಡ್ ಮೆಟಲ್ ಡಿಟೆಕ್ಟರ್) ಉಪಯೋಗಿಸಲಾಗುವುದು ಮತ್ತು ಡಿ.ಎಫ್.ಎಂ.ಡಿ. (ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್)ಗಳನ್ನು ಅಳವಡಿಸಲಾಗಿರುತ್ತದೆ. ಪರೀಕ್ಷಾ ಕೊಠಡಿಯೊಳಗೆ ಯಾವುದೇ ರೀತಿಯ ನಕಲು ವಸ್ತು, ಪೇಜರ್ಸ್, ಮೊಬೈಲ್ ಫೋನ್ಸ್, ಕ್ಯಾಲಕುಲೇಟರ್ ಮತ್ತು ಲೋಹದ ವಸ್ತುಗಳು ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಯಾವುದೇ ನಕಲು ವಸ್ತುಗಳು ಇಟ್ಟುಕೊಂಡಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು.

23. ಅಭ್ಯರ್ಥಿಗಳು ನಕಲು ಮಾಡಲು ಅತ್ಯಾದುನಿಕ ಮೊಬೈಲ್ ಫೋನ್ (ಉಪಯೋಗಿಸಲು) ಮರೆಮಾಚಿ ಕಿವಿಯಲ್ಲಿ / ದೇಹದಲ್ಲಿ ಗುಪ್ತವಾಗಿ ಇಟ್ಟುಕೊಂಡಿರುವುದು ಪತ್ತೆ ಹಚ್ಚಲು ಆಧುನಿಕ ಸಾಧನ ಬಳಸಿ ಎಲ್ಲಾ ಅಭ್ಯರ್ಥಿಗಳ ಕಿವಿ / ದೇಹವನ್ನು ಸಹ ಚೆಕ್ ಮಾಡಲಾಗುವುದು.

24. ಅಭ್ಯರ್ಥಿಗಳು ಪರೀಕ್ಷಾ ಅವಧಿಯಲ್ಲಿ ಸಹ ಪರೀಕ್ಷಾ ಅಭ್ಯರ್ಥಿಗಳೊಂದಿಗೆ ಮಾತನಾಡುವುದು ಅಥವಾ ವಿಚಾರ ವಿನಿಮಯ ಮಾಡಿಕೊಳ್ಳುವುದು, ಸಲಹೆ ಸೂಚನೆ ನೀಡುವುದು ಅಥವಾ ಕೈ ಸನ್ನೆಗಳ ಮೂಲಕ ಉತ್ತರವನ್ನು ಸೂಚಿಸುವುದು ಅಥವಾ ಪ್ರಶ್ನೆ ಪತ್ರಕೆಯಲ್ಲಿ ಉತ್ತರಗಳನ್ನು ಗುರುತು ಮಾಡಿ ಬದಲಾಯಿಸಿಕೊಳ್ಳುವುದಾಗಲೀ ಕಂಡು ಬಂದಲ್ಲಿ ಅಂತಹ ಪರೀಕ್ಷಾರ್ಥಿಗಳನ್ನು ಡಿಬಾರ್ ಮಾಡಲಾಗುವುದು.

25. **ದುರ್ನಡತೆ** : ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಸೂಚನೆಗಳ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

***<u>ಅಭ್ಯರ್ಥಿಗಳು ವಿವಿಧ ಜಿಲ್ಲೆಗಳಿಗೆ ಆಯ್ಕೆ ಬಯಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅಭ್ಯರ್ಥಿಗಳ ಹಿತದೃಷ್ಟಿಯಿಂದ ಅವರ ಸ್ವಂತ ಜಿಲ್ಲೆಯಲ್ಲಿ/ಹತ್ತಿರದ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರವನ್ನು ನಿಗಧಿಪಡಿಸಲಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸಿ, ಆಯ್ಕೆ ಬಯಸಿರುವ ಜಿಲ್ಲೆಯ ವೃತ್ತವನ್ನು OMR ನಲ್ಲಿ ಭರ್ತಿ ಮಾಡುವುದು. ಉದಾಹರಣೆಯನ್ನು ಈ ಕೆಳಗಿನಂತೆ ನೀಡಲಾಗಿದೆ.</u>***

**ಓಎಂಆರ್ ಉತ್ತರ ಪತ್ರಿಕೆ ಭರ್ತಿ ಮಾಡುವ ವಿಧಾನ : ಉದಾಹರಣೆಯಲ್ಲಿ ತೋರಿಸಿರುವಂತೆಯೇ ಭರ್ತಿ ಮಾಡತಕ್ಕದ್ದು. ಭರ್ತಿ ಮಾಡದೇ ಖಾಲಿ ಬಿಟ್ಟಲ್ಲಿ ಅಥವಾ ಅರ್ಜಿ ಸಲ್ಲಿಸದ ಘಟಕವನ್ನು ಆಯ್ಕೆ ಮಾಡಿದ್ದಲ್ಲಿ ಅಥವಾ ಒಂದಕ್ಕಿಂತ ಹೆಚ್ಚು ಘಟಕವನ್ನು ಭರ್ತಿ ಮಾಡಿದ್ದಲ್ಲಿ ನೇಮಕಾತಿ ಪ್ರಾಧಿಕಾರ ಕೈಗೊಳ್ಳುವ ಕ್ರಮವೇ ಅಂತಿಮವಾಗಿರುತ್ತದೆ.**


ಅಭ್ಯರ್ಥಿಯು ಯಾವ ಜಿಲ್ಲೆಯಲ್ಲಿ ಕುಳಿತು ಪರೀಕ್ಷೆ ಬರೆದರೂ ಸಹ ತಾವು ಅರ್ಜಿ ಸಲ್ಲಿಸಿರುವ ಜಿಲ್ಲೆಯ ವೃತ್ತವನ್ನು ಮಾತ್ರ ಭರ್ತಿ ಮಾಡುವುದು.


**<u>ಅಭ್ಯರ್ಥಿಯು ಕೇವಲ ಒಂದು ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ</u>** ಸಂಬಂಧಪಟ್ಟ ಅರ್ಜಿ ಸಂಖ್ಯೆ ಮತ್ತು ರೋಲ್ ನಂಬರನ್ನು ಭರ್ತಿ ಮಾಡುವುದು. ಓಎಂಆರ್‌ನ ಕಾಲಂ V ರಲ್ಲಿ ತಾವು ಅರ್ಜಿ ಸಲ್ಲಿಸಿದ ಜಿಲ್ಲೆಯನ್ನು ಅಯ್ಕೆ ಮಾಡಿ ವೃತ್ತವನ್ನು ಭರ್ತಿ ಮಾಡುವುದು.

**<u>ಉದಾಹರಣೆ–1:</u>** ಅಭ್ಯರ್ಥಿಯು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರುಗೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸಿದ್ದಲ್ಲಿ, ಈ ಕೆಳಗಿನಂತೆ ಭರ್ತಿ ಮಾಡುವುದು.

| Applied Unit<br>ಅರ್ಜಿ ಸಲ್ಲಿಸಿರುವ ಜಿಲ್ಲೆ | App No.<br>ಅರ್ಜಿ ಸಂಖ್ಯೆ |
|---|---|
| D.K.Dist, Mangaluru | 1312001 |

Examination Centre :ಪರೀಕ್ಷಾ ಕೇಂದ್ರ
Govt. Pre University College & High School, Udupi,



**ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ** ಆಯ್ಕೆ ಬಯಸುವ ಜಿಲ್ಲೆಯ ಅರ್ಜಿ ಸಂಖ್ಯೆ, ರೋಲ್ ನಂಬರನ್ನು ಹಾಗೂ ಜಿಲ್ಲೆಯನ್ನು ಅಯ್ಕೆ ಮಾಡಿ ವೃತ್ತವನ್ನು ತುಂಬುವುದು.

**ಅಭ್ಯರ್ಥಿಗಳು ವಿವಿಧ ಜಿಲ್ಲೆಗಳಿಗೆ ಆಯ್ಕೆ ಬಯಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅಭ್ಯರ್ಥಿಗಳ ಹಿತದೃಷ್ಟಿಯಿಂದ ಅವರ ಸ್ವಂತ ಜಿಲ್ಲೆಯಲ್ಲಿ/ಹತ್ತಿರದ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರವನ್ನು ನಿಗಧಿಪಡಿಸಲಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ತಾವು ಅರ್ಜಿ ಸಲ್ಲಿಸಿರುವ ಜಿಲ್ಲೆಗಳ ಪೈಕಿ ಆಯ್ಕೆ ಬಯಸುವ ಒಂದು ಜಿಲ್ಲೆಯನ್ನು ಆಯ್ಕೆ ಮಾಡಿ ವೃತ್ತವನ್ನು ಭರ್ತಿ ಮಾಡುವುದು. ಉದಾಹರಣೆಯನ್ನು ಈ ಕೆಳಗಿನಂತೆ ನೀಡಲಾಗಿದೆ.**

**ಓಎಂಆರ್ ಉತ್ತರ ಪತ್ರಿಕೆ ಭರ್ತಿ ಮಾಡುವ ವಿಧಾನ : ಉದಾಹರಣೆಯಲ್ಲಿ ತೋರಿಸಿರುವಂತೆಯೇ ಭರ್ತಿ ಮಾಡತಕ್ಕದ್ದು. ಭರ್ತಿ ಮಾಡದೇ ಖಾಲಿ ಬಿಟ್ಟಲ್ಲಿ ಅಥವಾ ಅರ್ಜಿ ಸಲ್ಲಿಸದ ಘಟಕವನ್ನು ಆಯ್ಕೆ ಮಾಡಿದ್ದಲ್ಲಿ ಅಥವಾ ಒಂದಕ್ಕಿಂತ ಹೆಚ್ಚು ಘಟಕವನ್ನು ಭರ್ತಿ ಮಾಡಿದ್ದಲ್ಲಿ ನೇಮಕಾತಿ ಪ್ರಾಧಿಕಾರ ಕೈಗೊಳ್ಳುವ ಕ್ರಮವೇ ಅಂತಿಮವಾಗಿರುತ್ತದೆ.**

**ಉದಾಹರಣೆ–2**: ಅಭ್ಯರ್ಥಿಯು ಬೀದರ್, ಬೆಂಗಳೂರು ನಗರ, ತುಮಕೂರು, ಕೋಲಾರ ಇನ್ನಿತರೆ ಜಿಲ್ಲೆಗಳಿಗೆ ಅರ್ಜಿ ಸಲ್ಲಿಸಿದ್ದರೂ ಸಹ ಅಭ್ಯರ್ಥಿಯ ಸ್ವಂತ ಜಿಲ್ಲೆ ಅಥವಾ ಸಮೀಪದ ಯಾವುದಾದರೊಂದು ಜಿಲ್ಲೆಯಲ್ಲಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಲಾಗಿದೆ. ಆದ್ದರಿಂದ ಅಭ್ಯರ್ಥಿಯು ತಾವು ಆಯ್ಕೆ ಬಯಸುವ ಜಿಲ್ಲೆಯ ವೃತ್ತವನ್ನು ಮಾತ್ರ ಭರ್ತಿ ಮಾಡುವುದು.

| Applied Unit<br>ಅರ್ಜಿ ಸಲ್ಲಿಸಿರುವ ಜಿಲ್ಲೆ | App No.<br>ಅರ್ಜಿ ಸಂಖ್ಯೆ |
|---|---|
| Bidar District | 1006870 |
| Bengaluru City | 1804971 |
| Tumakuru Dist | 1312501 |
| Kolar Dist | 2000480 |

Examination Centre : ಪರೀಕ್ಷಾ ಕೇಂದ್ರ
Government College, Tumkur.

